# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.24395/2017

| | |
|---|---|
| ಸಾಕ್ಷಿದಾರರ ಹೆಸರು : | ಡಿ. ತಿಮ್ಮರಾಜು |
| ತಂದೆಯ ಹೆಸರು : | ಲೇಟ್. ಟಿ. ದಾಸಪ್ಪ |
| ವಯಸ್ಸು : | 66 ವರ್ಷ |
| ಉದ್ಯೋಗ : | ನಿವೃತ್ತ ಪಿ.ಎಸ್.ಐ |
| ವಾಸ : | ಬಿ.ಟಿ.ಎಮ್, ಲೇಔಟ್, ಬೆಂಗಳೂರು. |

**ದಿನಾಂಕ 26/03/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**
**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ನಾನು 2015 ರಿಂದ 2020 ರವೆರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 12/03/2015 ರಂದು ಸಂಜೆ 06.30 ಗಂಟೆಯ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದ ಪಕ್ಕದಲ್ಲಿ ಕತ್ತಲಿದ್ದು, 5 ಜನ ಅಪರಿಚಿತರು ಮಾರಕಾಸ್ತ್ರಗಳನ್ನು ಇಟ್ಟುಕೊಂಡು ದರೋಡೆ ಮಾಡಲು ಹೊಂಚು ಹಾಕುತ್ತಿದ್ದಾರೆ ಎಂದು ಮಾಹಿತಿ ಬಂದಿತ್ತು. ಇಬ್ಬರು ಪಂಚರನ್ನು ಪೊಲೀಸ್ ಠಾಣೆಗೆ ಕರೆಯಿಸಿ ಅವರಿಗೆ ವಿಷಯ ತಿಳಿಸಿ ಅವರನ್ನು ಮತ್ತು ನನ್ನ ಸಿಬ್ಬಂದಿಗಳಾದ ಚಾಸಾ-4 ರಿಂದ 8 ರವರನ್ನು ಕರೆದುಕೊಂಡು ಖಾಸಗಿ ವಾಹನದಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ನಿಲ್ಲಿಸಿ. ದೂರದಿಂದ ಆರೋಪಿತರು ಹೊಂಚು ಹಾಕುತ್ತಿರುವುದನ್ನು ಗಮನಿಸಿ ಚಾಸಾ-7 ರವರನ್ನು ನೋಡಿಕೊಂಡು ಬರುವಂತೆ ಕಳುಹಿಸಿರುತ್ತೇನೆ. ಚಾಸಾ-7 ರವರು ಹೋಗಿ ಬಂದು ಹೇಳಿದ್ದು ಏನೆಂದರೆ ಹತ್ತಿರಕ್ಕೆ ಅವರ ಮಾತು ಕೇಳಿದಾಗ ದಾರಿಯಲ್ಲಿ ಹೋಗಿಬರುವವರಿಗೆ ಅಡ್ಡಗಟ್ಟಿ ಮಚ್ಚು ಮತ್ತು

ಮತ್ತಿತರ ಆಯುಧಗಳನ್ನು ತೋರಿಸಿ ಹೆದರಿಸಿ ಅವರ ಬಳಿ ಇದ್ದ ಹಣ, ಆಭರಣ ಮತ್ತು ಮೊಬೈಲ್ ಗಳನ್ನು ಕಿತ್ತುಕೊಳ್ಳೋಣ ಎಂದು ಮಾತನಾಡುತ್ತಿದ್ದಾರೆ ಎಂದು ತಿಳಿಸಿದರು.

3. ಆದ್ದರಿಂದ ಎಲ್ಲ ಸಿಬ್ಬಂದಿಗಳೊಂದಿಗೆ ಒಟ್ಟಿಗೆ ಹೋಗಿ ದಾಳಿ ಮಾಡಿ 4 ಜನರನ್ನು ನಾವು ಹಿಡಿದುಕೊಂಡೆವು, ಒಬ್ಬ ಆರೋಪಿಯು ಓಡಿ ಹೋಗಿರುತ್ತಾನೆ. ಚಾಸಾ-4 ರವರು ಹಿಡಿದ ಆರೋಪಿಯ ಹೆಸರು ಉಬೇದ್ ಪಾಷಾ ಅಲಿಯಾಸ ಉಬೇದ್ ಬಿನ್ ಅಬ್ದುಲ್ ರಹೀಮ್ ಆಗಿರುತ್ತದೆ, ಆತನ ಬಳಿ ಒಂದು ಕಬ್ಬಿಣದ ಲಾಂಗ್ ಇತ್ತು. ಚಾಸಾ-7 ರವರು ಹಿಡಿದ ಆರೋಪಿಯ ಹೆಸರು ಇಮ್ರಾನ್ ಪಾಷಾ ಅಲಿಯಾಸ ಇಮ್ರಾನ್ ಬಿನ್ ಸಯ್ಯದ್ ಅಕ್ರಮ ಆಗಿರುತ್ತದೆ, ಆತನ ಬಳಿ ಒಂದು ಕಬ್ಬಿಣದ ಚಾಕು ಮತ್ತು ಪ್ಲಾಸ್ಟಿಕ್ ಕವರ್ ನಲ್ಲಿ ಮೆಣಸಿನಕಾಯಿ ಪುಡಿ ಪೊಟ್ಟಣ ಇತ್ತು. ಚಾಸಾ-8 ರವರು ಹಿಡಿದ ಆರೋಪಿಯ ಹೆಸರು ಅಕ್ರಮ ಬೇಗ್ ಅಲಿಯಾಸ ಅಕ್ರಮ್ ಬಿನ್ ಸಯ್ಯದ್ ಇಸ್ಮದ್ ಬೇಗ್ ಆಗಿರುತ್ತದೆ, ಆತನ ಬಳಿ ಒಂದು ಕಬ್ಬಿಣದ ಪೈಪ್ ಮತ್ತು ಒಂದು ಖಾರದ ಪುಡಿ ಪೊಟ್ಟಣ ಇತ್ತು. ಚಾಸಾ-5 ರವರು ಹಿಡಿದ ಆರೋಪಿಯ ಹೆಸರು ರಮೇಶ ಬಿನ್ ಸಿದ್ದೇಗೌಡ ಆಗಿರುತ್ತದೆ, ಆತನ ಬಳಿ ಒಂದು ಚಾಕು ಇತ್ತು. ಸದರಿ ಆರೋಪಿತರನ್ನು ವಿಚಾರಿಸಿದಾಗ ತಪ್ಪಿಸಿಕೊಂಡು ಹೋದ ಆರೋಪಿಯ ಹೆಸರು ಪಳಂ ನವಾಜ್ ಬಿನ್ ಅನ್ವರ್ ಪಾಷಾ ಎಂದು ತಿಳಿಸಿರುತ್ತಾರೆ.

4. ಸ್ಥಳದಲ್ಲಿ ರಾತ್ರಿ 07.30 ರಿಂದ 09.00 ಗಂಟೆಯವರೆಗೆ ಪಂಚನಾಮೆ ತಯಾರಿಸಿ ಆರೋಪಿತರ ಬಳಿ ಇದ್ದ ಎಲ್ಲ ಮಾರಕಾಸ್ತ್ರಗಳನ್ನು ಅಮಾನತ್ತು ಪಡಿಸಿಕೊಂಡಿದ್ದೇನೆ ಮತ್ತು ಪಂಚನಾಮೆಗೆ ಪಂಚರ ಸಹಿ ಪಡೆದಿರುತ್ತೇನೆ. ಆರೋಪಿತರನ್ನು ಮತ್ತು ವಶಪಡಿಸಿಕೊಂಡ ಮಾಲುಗಳೊಂದಿಗೆ ಠಾಣೆಗೆ ಹಿಂತಿರುಗಿ ಪ್ರಕರಣ ದಾಖಲಿಸಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು

ಮೇಲಾಧಿಕಾರಿಯವರಿಗೆ ಕಳುಹಿಸಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಮಾಲುಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಅದೇ ದಿನ ಚಾಸಾ-2 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ದಿನಾಂಕ 13/03/2016 ರಂದು ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಮತ್ತು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ವಹಿಸಿಕೊಟ್ಟಿರುತ್ತೇನೆ. 4 ಜನ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

5. ಸಾಕ್ಷಿಯು ದಾಳಿ ಪಂಚನಾಮೆಯ ಪ್ರತಿಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ದಾಳಿ ಪಂಚನಾಮೆಯ ಪ್ರತಿಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು**. ಸಾಕ್ಷಿಯು ಪ್ರ.ವ ವರದಿಯ ಪ್ರತಿಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಪ್ರ.ವ ವರದಿಯ ಪ್ರತಿಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು**. ಅಮಾನತ್ತು ಪಡಿಸಿಕೊಂಡ ಮಾಲುಗಳನ್ನು ನೋಡಿದರೆ ಗುರುತಿಸಬಲ್ಲೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.